

# ಹರೆಯವೆಂಬ ಬೇಸಿಗೆಯ ಧಗೆ!

■ ಗೌರಿ

ಎತ್ತರದ ಆಕಾಶದಲ್ಲಿ ಹಾರುತ್ತಿರುವ ಹಕ್ಕಿಗಳ ಗುಂಪುಗಳು ನಮಗೆ ಬರೀ ಆಕಾರವಾಗಿಯಷ್ಟೇ ಕಾಣಿಸುತ್ತಿರುತ್ತವಲ್ಲವೇ? ಎಲ್ಲವೂ ಒಂದೇ ಥರ, ಒಂದೇ ಗಾತ್ರ... ಅವುಗಳಲ್ಲಿ ಒಂದರಿಂದ ಇನ್ನೊಂದಕ್ಕೆ ಇರುವ ವ್ಯತ್ಯಾಸಗಳು ಕಣ್ಣಿಗೆ ಬೀಳುವುದೇ ಇಲ್ಲ. ಆದರೆ ಅವುಗಳಲ್ಲಿ ಒಂದಕ್ಕಿಂತ ಇನ್ನೊಂದಕ್ಕೆ ಎಷ್ಟೊಂದು ವ್ಯತ್ಯಾಸ...

ಹೀಗೆ ಮೇಲ್ನೋಟಕ್ಕೆ ಒಂದೇ ರೀತಿ ಕಾಣುವವರ ನಡುವೆ ಇರುವ ವ್ಯತ್ಯಾಸ, ವೈರುಧ್ಯಗಳನ್ನು ಮತ್ತು ಅಷ್ಟು ವ್ಯತ್ಯಾಸಗಳನ್ನು ಒಳಗೊಂಡೂ ಎಲ್ಲರನ್ನೂ ಒಂದು ತಂತುವಿನಲ್ಲಿ ಪೋಣಿಸಲು ಸಾಧ್ಯವಾಗುವ ವಿಸ್ಮಯವನ್ನೂ ಒಟ್ಟೊಟ್ಟಿಗೇ ಕಟ್ಟಿಕೊಡುವ ಚಿತ್ರ 'ಬರ್ಡ್ಸ್'.

ಸಾಕ್ಷ್ಯಚಿತ್ರ ಮತ್ತು ಕಥನಚಿತ್ರ ಎರಡೂ ಪ್ರಕಾರಗಳನ್ನೂ ಬೆಸೆದು ಹೆಣೆದಿರುವ ಚಿತ್ರವಿದು. ಆರಂಭ, ಮಧ್ಯಂತರ, ಕೊನೆಗಳೆಂಬ ಸಿದ್ಧ ಮಾದರಿಗೆ ಜೋತುಬೀಳದೆ, ಭಿನ್ನ ರೂಪ, ರಸ, ಗಂಧಗಳಿರುವ ಹಲವು ಕುಸುಮಗಳನ್ನು ಒಂದು ಚೌಕಟ್ಟಿನೊಳಗೆ ಜೋಡಿಸಿಟ್ಟು, ಅವುಗಳನ್ನು ಜೋಡಿಸಿಕೊಳ್ಳುವ ಅಥವಾ ಹಾಗೆಯೇ ಆಸ್ವಾದಿಸುವ ಸ್ವಾತಂತ್ರ್ಯವನ್ನು ವೀಕ್ಷಕನಿಗೇ ಬಿಟ್ಟುಕೊಡುವ ಚಿತ್ರವಿದು.

ಹದಿಹರೆಯ ಎನ್ನುವುದು ಎಲ್ಲರ ಬದುಕಿನಲ್ಲಿಯೂ ಒಂದು ರೀತಿಯಲ್ಲಿ ಧಗೆಯ ಬೇಸಿಗೆ ಇದ್ದಂತೆ. ಜಗತ್ತೇ ಕುದಿಯುತ್ತಿರುವ ಹಾಗೆ ಭಾಸವಾಗುತ್ತದೆ. ಮನಸ್ಸು ಸಿಡಿದೇಳಲು ಕಾದುಕೊಂಡಿರುತ್ತದೆ. ಸಣ್ಣದೊಂದು ತಂಗಾಳಿ ಸೋಕಿ ಹೋದರೂ ಕ್ಷಣದ ಹಿಂದಿನ ಅಸಹನೆ ಸುಳ್ಳೇ ಎಂಬಷ್ಟು ಹೃದಯ ಮೃದುವಾಗಿ ನಸುನಗುತ್ತದೆ. ಇಂಥ ಬದುಕಿನ ಬೇಸಿಗೆಯನ್ನು ಪ್ರಕೃತಿಯ ಬೇಸಿಗೆಯೊಟ್ಟಿಗೆ ಸಮೀಕರಿಸಿ ನೋಡುತ್ತದೆ ಈ ಕಿರುಚಿತ್ರ. ಈ ಇಡೀ ಕಥೆ ನಡೆಯುವುದು ಟೆಕ್ಸಾಸ್‌ನ ಬಿರುಬೇಸಿಗೆಯಲ್ಲಿ.

ಒಂದು ನಸುಗತ್ತಲ ಕೋಣೆಯಲ್ಲಿ ಮಂಚದ ಮೇಲೆ ಮಲಗಿರುವ ಮೂವರು ಹದಿಹರೆಯದ ಹುಡುಗಿಯರು, 'ಬೋರಾಗಿದೆ' ಎಂದು ಹೇಳಿ ಟಿಕ್‌ಟಾಕ್ ವಿಡಿಯೊ ಮಾಡುವುದರೊಂದಿಗೆ ಈ ಚಿತ್ರ ಶುರುವಾಗುತ್ತದೆ. ಅಲ್ಲಿಂದ ಕಟ್ ಆದರೆ ಕಾಡಿನ ನಡುವೆ ನಡೆದುಕೊಂಡು ಹೋಗುತ್ತಿರುವ ಇಬ್ಬರು ಹುಡುಗರು... ಹೀಗೆ ಹಲವು ಹರೆಯದ ಹುಡುಗಿ/ಹುಡುಗರ ಕಥೆಗಳನ್ನು 'ಕಟ್ ಟು' ಮಾದರಿಯಲ್ಲಿ ತುಣುಕು ತುಣುಕಾಗಿ ನಮ್ಮೆದುರು ಇಡುತ್ತ ಹೋಗುತ್ತಾರೆ. ಅಲ್ಲಿ ಈಗಷ್ಟೇ ಅರಳಿಕೊಳ್ಳುತ್ತಿರುವ ಪ್ರೇಮವನ್ನು ಭರಿಸುವ ಪುಳಕ, ಹಿಂಜರಿಕೆಯಲ್ಲಿರುವ ಜೋಡಿ ಇದ್ದಾರೆ. ಸೈಕಲ್ ರೇಸಿಂಗ್ ಮಾಡುತ್ತಿರುವ ಹುಡುಗರಿದ್ದಾರೆ. ನದಿಯ ದಡದಲ್ಲಿ ಕೂತ ಗೆಳತಿಯರಿದ್ದಾರೆ, ಅವಳಲ್ಲೊಬ್ಬಳಿಗೆ ತನ್ನ ಹಳೆಯ ಗೆಳೆಯ ಗುಂಗಿನಿಂದ ಬಿಡಿಸಿಕೊಳ್ಳಲಾಗುತ್ತಿಲ್ಲ. ಅತ್ತ ಅವನೂ ಒಂದು ಕತ್ತಲಕೋಣೆಯಲ್ಲಿ ಕೂತು ಬೆಕ್ಕಿನೊಂದಿಗೆ ಮಾತಾಡುತ್ತ ಗೆಳತಿಯನ್ನೇ ನೆನಪಿಸಿಕೊಳ್ಳುತ್ತಿದ್ದಾರೆ. ಈ ಎಲ್ಲ ಭಿನ್ನ ಕಥೆಗಳನ್ನೂ ಹೆಣೆಯುವ ನೇಯ್ಗೆಯ ಹಾಗೆ ಬಿರುಬಿರು ಬೇಸಿಗೆಯಿದೆ. ಈ ಎಲ್ಲ ಎಳೆಗಳನ್ನೂ ಕೊನೆಮುಟ್ಟಿಸುವ ಧಾವಂತವಿಲ್ಲದೆ, ನಿರ್ದೇಶಕಿ ಇರುವಷ್ಟೆ, ಕಾಣಿಸುವಷ್ಟೇ ಕಟ್ಟಿಕೊಡುತ್ತ ಹೋಗುತ್ತಾರೆ. ಹಾಗಾಗಿ ಇದಕ್ಕೊಂದು ಆರಂಭವೂ ಇಲ್ಲ; ಅಂತ್ಯವೂ ಇಲ್ಲ. ಹೊಳೆಯಿಂದ ಬೊಗಸೆಯಲ್ಲಿ ಹಿಡಿದ ನೀರಿನಲ್ಲಿ ಇಡೀ ಹೊಳೆಯ ಜಾತಕವೇ ಹುದುಗಿರುವಂತೆ ಹರೆಯದ ಹಲವು ಮನಸ್ಥಿತಿಗಳ, ತಳಮಳಗಳ, ತಲ್ಲಣಗಳು, ಖುಷಿಯ, ಆತಂಕದ, ಹಿಂಜರಿಕೆ, ಭಯದ, ಇವನ್ನೆಲ್ಲ ಮೀರಿ ಜಿಗಿಯುವ ಹಂಬಲದ, ಅದು ಸಾಧ್ಯವಾಗದ ಚಡಪಡಿಕೆಯ ಎಳೆಗಳೆಲ್ಲ ಇಲ್ಲಿವೆ. ಕಥೆಯ ಎಲ್ಲ ಗುಣಗಳಿದ್ದೂ ಕಥನವಾಗದ ಚಿತ್ರವಿದು. ಕಥನವಾಗುವ ಹಟವೂ ಇಲ್ಲ ಎನ್ನುವುದೇ ಇದರ ಅಗ್ಗಳಿಕೆ.

ಈ ಚಿತ್ರವನ್ನು ತಯಾರಿಸಿದ ರೀತಿ ಸಾಕ್ಷ್ಯಚಿತ್ರಕ್ಕೆ ಹತ್ತಿರವಾದದ್ದು. ಇಲ್ಲಿರುವವರಾರೂ ವೃತ್ತಿಪರ ಕಲಾವಿದರಲ್ಲ. ಅವರ ಬದುಕಿನ ಸಹಜ ಗಳಿಗೆಗಳನ್ನು ಹಿಡಿದಿಡುವುದೇ ಈ ಚಿತ್ರದ ಉದ್ದೇಶವಾಗಿರುವುದರಿಂದ ವೃತ್ತಿಪರ ನಟರು ಅಲ್ಲದಿರುವುದೇ ಅನುಕೂಲವನ್ನು ಒದಗಿಸಿದೆ.

ಹೆಸರು: ಬರ್ಡ್ಸ್ (ಇಂಗ್ಲಿಷ್)
ನಿರ್ದೇಶನ: ಕ್ಯಾಥರಿನ್ ಪ್ರೊಪರ್
ನಿರ್ಮಾಣ: ಸೋಫಿಯಾ ಲೋಫ್ರೆಡಾ
ಛಾಯಾಗ್ರಹಣ: ಸ್ಯಾಮ್ ಮೊನಿ
ಸಂಯೋಜನೆ: ಕೋಲ್ ಮೆಕ್‌ಡೊನೆರ್
ತಾರಾಗಣ: ಪೇಟಮ್ ವಾಷಿಂಗ್ಟನ್, ಲೈಲಾ ಬ್ರೌನ್, ಜೆನಿಸಿಸ್ ಮಿಷಲ್, ಎಮ್ಮರ್ಟ್ ಮೆಕ್‌ಕಾರ್ಮಿಕ್, ಜಾನ್ ಅರೆಡೊಂಡೊ, ಸ್ಟೀವ್ ಬ್ರುಡ್‌ನೈಕ್, ಬೈಲೆ ತ್ರಾಂಗ್, ಬ್ರೂಕ್ ಮೆಕರ್ಥಿ, ಮಾರಿಯಾ ರೋಕ್ಸಾನಾ ಮೋಲಿನಾ

ಕಿರುಚಿತ್ರ ವೀಕ್ಷಣೆಗೆ https://bit.ly/3B8e2sM ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.